ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನಂಬರ್/ಮಪ/ಕೇ.ಜಿ.ಎ/239/16-17

Ad.Com/MDP/ 489 / 16-17 No. A 45844

ಸಿಟಿ ಮಜಕೂರ್ ಮಹದೇವಪುರ ನೇ ಡಿವಿಜನ್ ವಾರ್ಡ್-84 ನೇ
ಮುನಿಯಪ್ಪ ಮತ್ತು ಇತರರು. G.P.A ದಾರರಾದ M/S. N.U.T. Quality Life Style projects. PVT, LTD. Rep by its Director
ನಂಬರು ಮನೆಗೆ ಮಾಲೀಕ / ವಾಸಸ್ಥರಾದ Sri Vivek Garg and Tanuj Garg.
ನೀವು Katha: No-600, 550. Survey No. 117/2, 117/3, 117/4, 117/5 — 118, 117/1 ನೇ ನಂಬರಿನಲ್ಲಿ ಕಟ್ಟಡ ಕಟ್ಟಬೇಕೆಂಬ ವಿಷಯ
ನಾಗೊಂಡನಹಳ್ಳಿ.
ಕುರಿತು ಬರೆದುಕೊಂಡ ತಾರೀಖು 23/12/16 ನಲ್ಲಿ ಕೊಟ್ಟ ಅರ್ಜಿ

ನಿವೇಶನದ ಅಳತೆ 19366.36
ಅಂತಸ್ತುಗಳು ನೆಲ+1ನೇ+2ನೇ ಅಂತಸ್ತಿನವರೆಗೆ
ಕಟ್ಟಡದ ಉಪಯೋಗ 65 ಘಟಕಗಳ ವಸತಿ ನಿವಾಸ ಉಪಯೋಗದ ಕಟ್ಟಡ
ಒಟ್ಟು ಕಟ್ಟಡದ ವಿಸ್ತೀರ್ಣ 19548.66.

ಸೂಚನೆ :– ಇದರ ಹಿಂಭಾಗದಲ್ಲಿ ಅಡಕವಾಗಿರುವ ಷರತ್ತುಗಳನ್ನು ಗಮನಿಸಿ ಅದಕ್ಕೆ ಒಳಪಟ್ಟು ನಡೆದುಕೊಳ್ಳಬೇಕು. ಅವುಗಳಲ್ಲಿ ಯಾವುದೇ ಒಂದು ಷರತ್ತುಗಳನ್ನು ಉಲ್ಲಂಘಿಸಿರುವುದಾಗಿ ಕಂಡುಬಂದರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಕ್ಟಿನ 462ನೇ ನಿಬಂಧನೆ ಮೇಲೆ ಕ್ರಮ ಜರುಗಿಸಲಾಗುವುದು.

ನಕ್ಷೆ ಮಂಜೂರಾತಿ ಶುಲ್ಕ 3369600/-
ಭದ್ರತಾ ಠೇವಣಿ ಶುಲ್ಕ 1954900/-
ಕಾರ್ಮಿಕರ ಭವಿಷ್ಯ ನಿಧಿ ಶುಲ್ಕ 3232100/-

ಸಹಾಯಕ ನಿರ್ದೇಶಕರು 30/3/17
ನಗರ ಯೋಜನೆ
ಮಹದೇವಪುರ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ತಾರೀಖು 30 ನೇ 03
ಮಾಹೆ 2017 ಇಸವಿ

# ಷರತ್ತುಗಳು

1. ಲೈಸನ್ಸು ಪಡೆದ ಎರಡು ವರ್ಷದೊಳಗಾಗಿ ಕೆಲಸವನ್ನು ಪೂರೈಸಿ ಆಫೀಸಿಗೆ ಬರಹ ಮೂಲಕ ತಿಳಿಸತಕ್ಕದ್ದು.
2. ಮಂಜೂರಾದ ಪ್ಲಾನಿಗೆ ವಿರೋಧವಾದ ಯಾವ ಕಾಮಗಾರಿಯನ್ನೂ ನಡೆಸಕೂಡದು.
3. ಕಾರ್ಪೊರೇಷನ್ ಅಧಿಕಾರಿಗಳು ಅಪೇಕ್ಷಿಸಿದ ವೇಳೆ ತೋರಿಸಲು, ಲೈಸೆನ್ಸು ಮತ್ತು ಪ್ಲಾನು ಸಹಾ ಕಟ್ಟುವ ಸ್ಥಳದಲ್ಲಿ ಸರ್ವದಾ ಸಿದ್ಧವಾಗಿರಬೇಕು.
4. ಕಟ್ಟಡದ ನಿವೇಶನದಲ್ಲಿ ಹಳ್ಳ ತೆಗೆಯಕೂಡದು.
5. ಪಾಯಿಖಾನೆ ಗೊತ್ತುಮಾಡಿರುವ ಸ್ಥಳವನ್ನು ಕಾರ್ಪೊರೇಷನ್ ರೆಗ್ಯುಲೇಷನ್ ಅನುಸರಿಸಿ ಪ್ರತಿದಿನವೂ ಪಾಕ್ ಮಾಡಲು ತಕ್ಕ ಏರ್ಪಾಡು ಮಾಡಬೇಕು. ಪಾಯಿಖಾನೆಯ ನೆಲಕ್ಕೂ ಮತ್ತು ಸುತ್ತಲೂ ಕಲ್ಲು ಕಟ್ಟಿಸಿ ನೀರು ಭೂಮಿಗೆ ಇಳಿಯದಂತೆ ಸಿಮೆಂಟಿನಿಂದ ಸಂದುಗಾರೆ ಮಾಡಿಸತಕ್ಕದ್ದು.
6. ಮಾಳಿಗೆ ನೀರು ಕಾರ್ಪೊರೇಷನ್ ಜಮೀನು ಅಥವಾ ರಸ್ತೆ ಮೇಲೆ ಬೀಳದಂತೆ ಮೇಲಿನಿಂದ ಕೆಳಗಿನವರೆಗೂ ಗೋಡೆಗೆ ಲಗತ್ತಾಗಿ ಗಚ್ಚಿ ದಿಂಡನಿಂದ ತಗಡಿನಿಂದ ಯಾ ವಂಪಾದ ದೋಣಿಗಳನ್ನಿಟ್ಟು ಮೊಹರಿಗೆ ಸರಿಯಾಗಿ ಬಿಡತಕ್ಕದ್ದು.
7. ನೀವು ಕಟ್ಟತಕ್ಕ ಕಟ್ಟಡದ ಗೋಡೆಯ ಅಸ್ತಿಭಾರವು ರಸ್ತೆ ಪಕ್ಕದಲ್ಲಿರುವ ಮೊಹರಿಯಿಂದ ಒಂದೂವರೆ ಅಡಿಗಿಂತ ಕಮ್ಮಿ ದೂರದಲ್ಲಿರಕೂಡದು.
8. ಈ ಲೈಸೆನ್ಸಿನಿಂದ ನೀವು ಗೈರ್ ಮಾಮೂಲು ದೋಣಿ ಅಥವಾ ಬಚ್ಚಲು ನೀರು ತಿರುಗಿಸುವುದಕ್ಕೂ ಹೊಸದಾಗಿ ದಾರಿ ಮಾಡಿ ಕೊಳ್ಳುವುದಕ್ಕೂ ಬಾಗಿಲು ಕಿಟಕಿಗಳನ್ನು ಇಡಿಸುವುದಕ್ಕೂ ಅಥವಾ ಜಮೀನು ಸೇರಿಸಿಕೊಳ್ಳುವುದಕ್ಕೂ ಅಪ್ಪಣೆ ಪಡೆದಿರುವುದಿಲ್ಲ.
9. ಕಟ್ಟಡದ ಸಾಮಾನುಗಳನ್ನು ಸರ್ಕಾರಿ ರಸ್ತೆ, ಮೊಹರಿ ಯ ಕಾರ್ಪೊರೇಷನ್ ಜಮೀನಿನಲ್ಲಿ ಹಾಕಿಸಕೂಡದು.
10. ಕಟ್ಟಡದ ನಿವೇಶನದಲ್ಲಿ ಲಂಟಾಣ, ಕತ್ತಾಳಿ, ಬೊಂತೆಕತ್ತಾಳಿ ಇತರ ಆಕ್ಷೇಪಕರವಾದ ಗಿಡಗಳ ಬೇಲಿಯನ್ನು ಅಥವಾ ಮುಳ್ಳು ತಂತಿಯ ಬೇಲಿಯನ್ನು ಹಾಕಿಸಕೂಡದು,
11. ಕಟ್ಟಡದ ಸೂರು ಯಾ ಲೋಮೆಗಳ ಕಿಟಕಿಗಳ ಮೇಲಿನ ಬಿಸಿಲ್ತಡಿಕೆ, ದೋಣಿಗಳು ಬೀದಿಯ ಮೊಹರಿಯಿಂದ ಮುಂದಕ್ಕೆ ಉಚ್ಚಾಯಿಸಿ ಬರಕೂಡದು.
12. ಲೈಸೆನ್ಸಿನಿಂದ ಕಟ್ಟತಕ್ಕ ನಿವೇಶನಕ್ಕೆ ಲೈಸೆನ್ಸುದಾರರಿಗೆ ಇದಕ್ಕೆ ಮೊದಲು ಇಲ್ಲದ ಹಕ್ಕುದಾರಿ ಈಗ ಹೊಸದಾಗಿ ಉಂಟಾಗುವುದಿಲ್ಲ ಮತ್ತು ಇತರರಿಗೆ ಇರಬಹುದಾದ ಹಕ್ಕಿಗೆ ಯಾವ ಕುಂದಕವೂ ಉಂಟಾಗುವುದಿಲ್ಲ.
13. ಹೊಗೆ ಹೋಗಲು ಇಡತಕ್ಕ ಚಿಮಣಿಗಳು ಮಾಳಿಗೆ ಮಟ್ಟಕ್ಕಿಂತ 4 ಅಡಿ ಕಮ್ಮಿ ಇಲ್ಲದಂತೆ ಎತ್ತರಿಸಿ ಕಟ್ಟಬೇಕು.
14. ಮೆಟ್ಟಲುಗಳನ್ನು ಬೇಸುಮೆಂಟಿನಲ್ಲಿ ಇಟ್ಟುಕೊಳ್ಳಬೇಕೇ ಹೊರತು ಕಟ್ಟಡದಿಂದೀಚೆಗೆ ಕಾರ್ಪೊರೇಷನ್ ಜಮೀನಿನ ಮೇಲೆ ಅಥವಾ ಮೊಹರಿನ ಮೇಲೆ ಬರುವಂತೆ ಇರಕೂಡದು.
15. ಕಿಟಕಿಗಳು, ಮನೆಗಳ ಅಥವಾ ಬೇಲಿಗಳ ಬಾಗಿಲುಗಳು ಒಳಭಾಗಕ್ಕೆ ತೆರೆಯುವಂತೆ ಇಡಿಸಬೇಕಲ್ಲದೆ ಕಾರ್ಪೊರೇಷನ್ ಜಾಗದ ಮೇಲೆ ಬರುವಂತೆ ಇಡಿಸಕೂಡದು.
16. ಗೋಡೆಗಳನ್ನು ಪೂರ್ತ ಮಣ್ಣಿನಿಂದ ಕಟ್ಟಿಸಕೂಡದು.
17. ಕಟ್ಟಡಗಳನ್ನು ಪೂರೈಸಿದ ಒಂದು ತಿಂಗಳೊಳಗಾಗಿ ಕಾರ್ಪೊರೇಷನ್ ಆಫೀಸಿಗೆ ಬರಹ ಮೂಲಕ ತಿಳಿಸತಕ್ಕದ್ದು.
18. ಮೇಲ್ಕಂಡ ಷರತ್ತುಗಳಿಗೂ ಮತ್ತು ಬೈಲಾಗಳಲ್ಲಿ ನಮೂದಿಸಿರುವ ಷರತ್ತುಗಳಿಗೂ ವಿರೋಧವಾಗಿ ನಡೆದಲ್ಲಿ ನಿಮ್ಮನ್ನು ಕಾರ್ಪೊರೇಷನ್ ಆಕ್ಟಿನ 381 ನೇ ಇಲ್ಲವೇ 462 ನೇ ನಿಬಂಧನೆಯಂತೆಯಾಗಲೀ ಅಥವಾ ಇವೆರಡು ನಿಬಂಧನೆಗಳಂತೆಯಾಗಲೀ ಶಿಕ್ಷೆಗೆ ಗುರಿಪಡಿಸಲಾಗುವುದು.